## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ. ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 566 (656) |
| ಉತ್ತರಿಸಬೇಕಾದ ದಿನಾಂಕ | 09.03.2026 |
| ಉತ್ತರಿಸಬೇಕಾದ ಸಚಿವರು | ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

******

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯದ ನದಿ ತೀರ ಪ್ರದೇಶಗಳ ಮತ್ತು ಜನವಸತಿ ಪ್ರದೇಶಗಳಲ್ಲಿ ಮೀನು ಸಂಸ್ಕರಣೆ ಹಾಗೂ ಇತರ ಕೈಗಾರಿಕಾ ಘಟಕಗಳು ಕಾರ್ಯನಿರ್ವಹಿಸುತ್ತಿರುವುದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದ್ದು, ಮಾಲಿನ್ಯ ಮೂಲಗಳನ್ನು ತಡೆಗಟ್ಟಲು ರಚಿಸಿದ ಕ್ರಿಯಾಯೋಜನೆಗಳೇನು; | ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಮತ್ತು ಕಾರವಾರ ಜಿಲ್ಲೆ ವ್ಯಾಪ್ತಿಯಲ್ಲಿ ಮೀನು ಸಂಸ್ಕರಣೆ ಹಾಗೂ ಇತರೆ ಕೈಗಾರಿಕೆಗಳು ಕರ್ನಾಟಕ ಸರ್ಕಾರವು ಹೊರಡಿಸಿರುವ Siting guidelines ಪಾಲನೆ ಅನುಸರಿಸಿ ಕಾರ್ಯ ನಿರ್ವಹಿಸುತ್ತಿದೆ.<br><br>Siting guidelines ಪಾಲನೆ ಮಾಡದೇ ಹಾಗೂ ಮಂಡಳಿಯ ಅನುಮತಿ ಪಡೆಯದೇ ಅಥವಾ ಅನುಮತಿ ಪಡೆದು ಷರತ್ತು ಹಾಗೂ ನಿಬಂಧನೆಗಳನ್ನು ಉಲ್ಲಂಘನೆ ಮಾಡಿ ಕಾರ್ಯಚರಣೆ ಮಾಡುವ ಕೈಗಾರಿಕೆಗಳಿಗೆ ಕಾರಣ ಕೇಳುವ ನೋಟಿಸು, ಉದ್ದೇಶಿತ ಮುಚ್ಚುವ ಆದೇಶ ಹಾಗೂ ಮುಚ್ಚುವ ಆದೇಶಗಳನ್ನು ಮಂಡಳಿಯಿಂದ ನೀಡಲಾಗುತ್ತಿದೆ.<br><br>ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನ ಉಳ್ಳಾಲದಲ್ಲಿ ಒಟ್ಟು 13 ಫಿಶ್ ಮಿಲ್ ಘಟಕಗಳು ಇರುತ್ತವೆ. ಸದರಿ 13 ಫಿಶ್ ಮಿಲ್ ಘಟಕದಿಂದ ಉತ್ಪತ್ತಿಯಾಗುವ ಕಲುಷಿತ ನೀರನ್ನು ಶುದ್ಧೀಕರಿಸಲು ಸಂಯುಕ್ತ ಸಂಸ್ಕರಣಾ ಶುದ್ಧೀಕರಣ ಘಟಕವನ್ನು (ಸಿಇಟಿಪಿ) ಅಳವಡಿಸಿದ್ದು, ತ್ಯಾಜ್ಯ ನೀರನ್ನು ಸಂಸ್ಕರಿಸಿ ನಂತರ ಮಂಡಳಿಯು ವಿಧಿಸಿರುವ ಮಾನದಂಡಕ್ಕೆ ಅನುಗುಣವಾಗಿ ಸಮುದ್ರಕ್ಕೆ ಬಿಡಲಾಗುತ್ತಿದೆ.<br><br>ಮುಕ್ಕಾದಲ್ಲಿ ಒಟ್ಟು 3 ಫಿಶ್ ಮಿಲ್ ಘಟಕಗಳು ಇರುತ್ತದೆ. ಸದರಿ ಘಟಕಗಳು ಪ್ರತ್ಯೇಕವಾಗಿ ತ್ಯಾಜ್ಯ ನೀರಿನ ಸಂಸ್ಕರಣಾ ಘಟಕವನ್ನು ಅಳವಡಿಸಿ ಸಂಸ್ಕರಿಸುತ್ತಾರೆ ಹಾಗೂ ಎರಡು ಫಿಶ್ ಮಿಲ್ ಘಟಕ (Fish cutting) ಇದ್ದು, ಸದರಿ ಘಟಕಗಳು ಪ್ರತ್ಯೇಕವಾಗಿ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಹೊಂದಿರುತ್ತವೆ.<br><br>ಉಡುಪಿ ಜಿಲ್ಲೆಯಲ್ಲಿ 5 ಫಿಶ್ ಮಿಲ್ ಘಟಕಗಳು ಇದ್ದು, ಸದರಿ ಘಟಕಗಳು ಪ್ರತ್ಯೇಕವಾಗಿ (Individual) ತ್ಯಾಜ್ಯ ನೀರಿನ ಸಂಸ್ಕರಣಾ ಘಟಕವನ್ನು ಹೊಂದಿದ್ದು, ತ್ಯಾಜ್ಯ ನೀರನ್ನು ಸಂಸ್ಕರಿಸಿ ಶುದ್ಧೀಕರಿಸುತ್ತವೆ. ಇವುಗಳಲ್ಲಿ 3 ಫಿಶ್ ಮಿಲ್ ಘಟಕಗಳು (Zero liquid Discharge) ಶುದ್ಧಿಕರಿಸಿದ ತ್ಯಾಜ್ಯ ನೀರನ್ನು ಸಂಪೂರ್ಣ ಮರುಬಳಕೆ ಮಾಡಲಾಗುತ್ತಿವೆ. ಉಳಿದ 2 ಘಟಕಗಳು ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ಮರುಬಳಕೆ ಮಾಡಿದ ನಂತರ ಹೆಚ್ಚುವರಿ ತ್ಯಾಜ್ಯ ನೀರನ್ನು ಸಮುದ್ರಕ್ಕೆ ಬಿಡುತ್ತವೆ. ಇದಲ್ಲದೆ 4 ಫಿಶ್ ಮಿಲ್ ಘಟಕಗಳು (Fish cutting) ಹಾಗೂ 1 ಸುರಮಿ ಫಿಶ್ ಘಟಕವು ಇದ್ದು, ಸದರಿಯವರು |

| | | |
|---|---|---|
| | | ಪ್ರತ್ಯೇಕ ಶುದ್ಧೀಕರಣ ಘಟಕಗಳನ್ನು ಹೊಂದಿರುತ್ತವೆ.<br>ಉತ್ತರ ಕನ್ನಡ ಜಿಲ್ಲೆಯಲ್ಲಿ (ಕಾರವಾರ) ಯಾವುದೇ ಫಿಶ್ ಮೀಲ್ ಘಟಕಗಳು ಇರುವುದಿಲ್ಲ.<br><br>ಮುಂದುವರೆದು, ನದಿ ತೀರ ಪ್ರದೇಶಗಳಲ್ಲಿ ಸ್ಥಾಪಿತವಾಗಿ ಕಾರ್ಯಾಚರಣೆಯಲ್ಲಿರುವ ಹಾಗೂ ತ್ಯಾಜ್ಯ ನೀರು ಉತ್ಪತ್ತಿಯಾಗುವ ಕೈಗಾರಿಕೆಗಳಿಗೆ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಅಳವಡಿಸಿ ನೀರನ್ನು ನದಿಗಳಿಗೆ ಹಾಗೂ ಇತರೇ ಮೂಲಗಳಿಗೆ ಸೇರದಂತೆ ಕ್ರಮ ವಹಿಸಲು ಸೂಚಿಸಲಾಗುತ್ತದೆ ಹಾಗೂ ವಾಯು ಮಾಲಿನ್ಯ ನಿಯಂತ್ರಣಕ್ಕಾಗಿ ಯಂತ್ರೋಪಕರಣಗಳಿಗೆ ಸ್ಕ್ರಬ್ಬರ್, ಡಸ್ಟ್ ಕಲೆಕ್ಟರ್, ವಿಂಡ್ ವಾಲ್, ಬ್ಯಾಗ್‌ಹೌಸ್ ಫಿಲ್ಟರ್ ಹಾಗೂ ಇತ್ಯಾದಿ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಲು ಷರತ್ತು ವಿಧಿಸಿ ಅನುಪಾಲನೆ ಮಾಡಿಸಲಾಗುತ್ತಿದೆ.<br><br>ಜನವಸತಿ ಪ್ರದೇಶಗಳಲ್ಲಿ ಅಂದರೇ ಪ್ರಸ್ತಾಪಿತ ಜಾಗವು ಕೈಗಾರಿಕಾ ಉದ್ದೇಶಕ್ಕೆ ಪರಿವರ್ತನೆಯಾಗದೇ ಯಾವುದೇ ಕೈಗಾರಿಕೆಗಳಿಗೆ ಮಂಡಳಿಯಿಂದ ಸ್ಥಾಪನಾ/ ಕಾರ್ಯಾಚರಣಾ ಸಮ್ಮತಿ ಪತ್ರ ನೀಡಲಾಗುವುದಿಲ್ಲ. |
| (ಆ) | ಕೈಗಾರಿಕೆ ಮತ್ತು ಮನೆಗಳ ಘನ ಮತ್ತು ದ್ರವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಉಲ್ಲಂಘಿಸಿರುವ ಪ್ರಕರಣಗಳಲ್ಲಿ ನೋಟಿಸು, ಮುಚ್ಚುಗಡೆ ಆದೇಶ ಮತ್ತು ಪರಿಹಾರ ಮೊತ್ತ ವಿಧಿಸಿರುವ ಪ್ರಕರಣಗಳೆಷ್ಟು; | ಕೈಗಾರಿಕೆ ಮತ್ತು ಮನೆಗಳ ಘನ ಮತ್ತು ದ್ರವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಉಲ್ಲಂಘಿಸಿರುವ ಪ್ರಕರಣಗಳಲ್ಲಿ ನೋಟಿಸು, ಮುಚ್ಚುಗಡೆ ಆದೇಶ ಮತ್ತು ಪರಿಹಾರ ಮೊತ್ತ ವಿಧಿಸಿರುವ ಪ್ರಕರಣಗಳ ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| (ಇ) | ದೂರುಗಳಿಗೆ ಕುರಿತಂತೆ ನೀರಿನ ಗುಣಮಟ್ಟ ಪರಿಶೀಲನೆಗಾಗಿ ಸಂಗ್ರಹಿಸಲಾದ ನೀರಿನ ಮಾದರಿಗಳ ಸಂಖ್ಯೆ ಎಷ್ಟು? ಈ ಪರೀಕ್ಷಾ ವರದಿಗಳ ಪೈಕಿ "ಬಿ" ವರ್ಗಕ್ಕೆ ಬರುವ ವರದಿಗಳೆಷ್ಟು; ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ನದಿ ನೀರಿನ ವರ್ಗೀಕರಣಗಳಾವುವು ನದಿ ನೀರಿನ ವರ್ಗೀಕರಣಗಳ ಪೈಕಿ ಯಾವಪ್ರಕಾರದ ವರ್ಗೀಕರಣ ಸುರಕ್ಷಿತ ಮತ್ತು ಹೇಗೆ; | ದೂರುಗಳಿಗೆ ಕುರಿತಂತೆ ನೀರಿನ ಗುಣಮಟ್ಟ ಪರಿಶೀಲನೆಗಾಗಿ ಸಂಗ್ರಹಿಸಲಾದ ನೀರಿನ ಮಾದರಿಗಳ ವಿವರಗಳು ಈ ಕೆಳಗಿನಂತಿರುತ್ತದೆ:- |

| ಜಿಲ್ಲೆ | ನೀರಿನ ಮಾದರಿ ಸಂಗ್ರಹ | "ಬಿ" ವರ್ಗದ ವರದಿಗಳ ಸಂಖ್ಯೆ |
|---|---|---|
| ದಕ್ಷಿಣ ಕನ್ನಡ ಜಿಲ್ಲೆ | 1. ನದಿ ನೀರಿನ ಮಾಲಿನ್ಯದ ಕುರಿತು ಸಂಗ್ರಹಿಸಲಾದ ಮಾದರಿಗಳ ಸಂಖ್ಯೆ -03<br>2. ಕೆರೆ ನೀರಿನ ಮಾಲಿನ್ಯದ ಕುರಿತು ಸಂಗ್ರಹಿಸಲಾದ ಮಾದರಿಗಳ ಸಂಖ್ಯೆ – 05 | 1.2 ಸಂಖ್ಯೆ<br>2.4 ಸಂಖ್ಯೆ |
| ಉಡುಪಿ ಜಿಲ್ಲೆ | 1. ನದಿ ನೀರಿನ ಮಾಲಿನ್ಯ ಕುರಿತು ಸಂಗ್ರಹಿಸಲಾದ ಮಾದರಿಗಳ ಸಂಖ್ಯೆ-02 | 2 ಸಂಖ್ಯೆ |
| ಉತ್ತರ ಕನ್ನಡ ಜಿಲ್ಲೆ | ಯಾವುದೇ ಮಾದರಿಯನ್ನು ಸಂಗ್ರಹಿಸಿರುವುದಿಲ್ಲ. | |

<table>
<tr>
<td></td>
<td></td>
<td>ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ನದಿ ನೀರಿನ ವರ್ಗೀಕರಣಗಳು ಈ ಕೆಳಗಿನಂತಿವೆ:<br>
<table>
<tr><td>ವರ್ಗೀಕರಣ- ಎ</td><td>ಶುದ್ಧೀಕರಣ ಇಲ್ಲದೆ (Disinfection ಮಾತ್ರ) ಕುಡಿಯಲು ಯೋಗ್ಯವಾದ ನೀರು.</td></tr>
<tr><td>ವರ್ಗೀಕರಣ- ಬಿ</td><td>ಹೊರಾಂಗಣ ಸ್ನಾನಕ್ಕೆ ಯೋಗ್ಯವಾದ ನೀರು</td></tr>
<tr><td>ವರ್ಗೀಕರಣ- ಸಿ</td><td>ಶುದ್ಧೀಕರಣ ಮತ್ತು Disinfection ಮಾಡಿದ ನಂತರ ಕುಡಿಯಲು ಯೋಗ್ಯ.</td></tr>
<tr><td>ವರ್ಗೀಕರಣ- ಡಿ</td><td>ಜಲಚರ ಜೀವಿಗಳ (Aquatic life) ಉಳಿವಿಗೆ ಯೋಗ್ಯವಾದ ನೀರು</td></tr>
<tr><td>ವರ್ಗೀಕರಣ- ಇ</td><td>ಕೈಗಾರಿಕಾ ಶೀತಲೀಕರಣ (Industrial Cooling), ನಿಯಂತ್ರಿತ ತ್ಯಾಜ್ಯ ವಿಸರ್ಜನೆಗೆ ಯೋಗ್ಯ.</td></tr>
</table>
</td>
</tr>
<tr>
<td>(ಈ)</td>
<td>ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಕರಾವಳಿ ಭಾಗದ ನದಿ ತೀರ ಪ್ರದೇಶಗಳಲ್ಲಿ ಕಟ್ಟಡಗಳಿಂದ ಶುದ್ಧೀಕರಿಸದ ತ್ಯಾಜ್ಯವನ್ನು ನದಿಗಳಿಗೆ ಬಿಡುತ್ತಿರುವ ಕುರಿತು 3 ದೂರುಗಳ ಬಗ್ಗೆ ಇದುವರೆಗೆ ಕೈಗೊಂಡಿರುವ ಕ್ರಮಗಳೇನು? ಮಾಲಿನ್ಯ ಬಗ್ಗೆ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾದ ವರದಿಗಳ ಆಧಾರದಲ್ಲಿ ಕ್ರಮವಹಿಸದಿರಲು ಕಾರಣವೇನು;</td>
<td>• ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಜಲ ಮೂಲಗಳಿಗೆ ಅಕ್ಕ ಪಕ್ಕದ ಜನವಸತಿ ಪ್ರದೇಶ, ವಾಣಿಜ್ಯ ಕಟ್ಟಡಗಳು ಹಾಗೂ ಸಣ್ಣ ಪ್ರಮಾಣದ ವಸತಿ ಸಮುಚ್ಚಯಗಳಿಂದ (ಮಂಡಳಿಯ ವ್ಯಾಪ್ತಿಗೆ ಬರುತ್ತಿರುವುದಿಲ್ಲ) ಉತ್ಪತ್ತಿಯಾಗುವ ಗೃಹ ಬಳಕೆ ತ್ಯಾಜ್ಯ ನೀರು ಇತರ ಮೂಲಗಳಿಂದ (Missing link) ನದಿಗಳಿಗೆ/ಕೆರೆಗಳಿಗೆ ಸೇರುತ್ತಿರುವುದು ಕಂಡುಬಂದಿರುತ್ತದೆ ಹಾಗೂ ಒಳಚರಂಡಿ ವ್ಯವಸ್ಥೆ (Under Ground Drainage-UGD) ಸರಿಯಾಗಿ ನಿರ್ವಹಣೆಯಾಗದೇ ಇರುವ ಬಗ್ಗೆ ಮಹಾನಗರ ಪಾಲಿಕೆಯ ವಿರುದ್ಧ ದೂರುಗಳು ಸ್ವೀಕೃತವಾದ ಹಿನ್ನಲೆಯಲ್ಲಿ ನೋಟಿಸು ನೀಡುವುದರ ಮೂಲಕ ಹಾಗೂ ಮಂಗಳೂರು ಮಹಾನಗರ ಪಾಲಿಕೆಯಿಂದ ಅನುಪಾಲನೆ ಮಾಡದಿರುವ ಹಿನ್ನಲೆಯಲ್ಲಿ ದಿನಾಂಕ: 08.12.2025 ರಂದು In the Court of Principal Senior Civil Judge and C.J.M Mangaluru, Dakshina Kannada ಇಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ಪ್ರಸ್ತುತ ಹಾಗೂ ಹಿಂದಿನ ಆಯುಕ್ತರ ವಿರುದ್ಧ ಈಗಾಗಲೇ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿರುತ್ತದೆ.<br>
• ಫೆಬ್ರವರಿ 3ನೇ ವಾರದಲ್ಲಿ ದಿನಪತ್ರಿಕೆಗಳಲ್ಲಿ ಪ್ರಚುರಗೊಂಡ ವರದಿಯನ್ವಯ ಮಂಗಳೂರು ನಗರದ ಕೂಳೂರು ಬಳಿ ಮಂಗಳೂರು ಸ್ಮಾರ್ಟ್ ಸಿಟಿ ಸಂಸ್ಥೆಯಿಂದ ಫಲ್ಗುಣಿ ನದಿಯಲ್ಲಿ ಕೈಗೊಂಡ ಕಾಮಗಾರಿಯಿಂದಾಗಿ ತಾತ್ಕಾಲಿಕ ತಡೆಗೋಡೆ ನಿರ್ಮಾಣಗೊಂಡ ನದಿ ನೀರು ಹರಿವು ಸ್ಥಗಿತಗೊಂಡು ಉಂಟಾದ ಮಾಲಿನ್ಯಕ್ಕೆ ಸಂಬಂಧಿಸಿದಂತೆ. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ಸ್ಮಾರ್ಟ್ ಸಿಟಿ ಇವರಿಗೆ ನೋಟಿಸ್ ಜಾರಿ ಮಾಡಿ, ಮಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ನದಿಯ ನೀರು ಹರಿವು ಸರಿಪಡಿಸಲು ಅಗತ್ಯ ತುರ್ತು ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ.<br><br>
ಇನ್ನುಳಿದಂತೆ, ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾದ ವರದಿಗಳ ಕುರಿತು ಮಂಡಳಿಯಿಂದ ಪರಿಶೀಲಿಸಿ ಕ್ರಮಕೈಗೊಳ್ಳುತ್ತದೆ.</td>
</tr>
<tr>
<td>(ಉ)</td>
<td>ಎಲ್ಲ ಕಟ್ಟಡಗಳ ಮಾಲಿಕರಿಗೆ ಗೃಹ ತ್ಯಾಜ್ಯವನ್ನು ತ್ಯಾಜ್ಯ ಸಂಸ್ಕರಣಾ ಘಟಕಗಳ</td>
<td>ಕಟ್ಟಡಗಳಲ್ಲಿ (ವಸತಿ ಸಮುಚ್ಚಯ ಹಾಗೂ ವಾಣಿಜ್ಯ ಸಂಕೀರ್ಣಗಳಿಗೆ ಸಂಬಂಧಿಸಿದಂತೆ) ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು (Sewage Treatment Plant) ಅಳವಡಿಸುವ ಕುರಿತು, ದಿನಾಂಕ:19.01.2016 ರಂದು ಹೊರಡಿಸಿರುವ ಅಧಿಸೂಚನೆಯಂತೆ ಒಳಚರಂಡಿ ಇರುವ</td>
</tr>
</table>

| | | |
|---|---|---|
| | ಮೂಲಕ ಸಂಸ್ಕರಿಸಲು ಸೂಚಿಸಲಾಗಿದೆಯೇ? ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ನದಿ ತೀರ ಪ್ರದೇಶಗಳ ಪರಿಸರ ಸಂರಕ್ಷಣೆಗೆ ಸಮಗ್ರ ಮತ್ತು ಕಾಲಬದ್ಧ ಕಾರ್ಯ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲಾಗುವುದು? | ಹಾಗೂ ಇಲ್ಲದೇ ಇರುವ ಪ್ರದೇಶಗಳಲ್ಲಿ 2000 ಚ.ಮೀಟರ್‌ಗಿಂತ ಹೆಚ್ಚು ವಿಸ್ತೀರ್ಣ ಇರುವ ವಸತಿ ಹಾಗೂ ವಾಣಿಜ್ಯ ಸಂಕೀರ್ಣಗಳಿಗೆ ರೊಚ್ಚು ನೀರು ಸಂಸ್ಕರಣಾ ಘಟಕ ನಿರ್ಮಿಸುವಂತೆ ನಿರ್ದೇಶಿಸಲಾಗಿತ್ತು. ಪ್ರಸ್ತುತ ದಿನಾಂಕ:12.03.2024ರಂದು ಸರ್ಕಾರವು ಸದರಿ ಅಧಿಸೂಚನೆಗೆ ತಿದ್ದುಪಡಿ ಮಾಡಲಾಗಿದ್ದು, ಅದರಂತೆ ಒಳಚರಂಡಿ ವ್ಯವಸ್ಥೆ ಇರುವ ಪ್ರದೇಶದಲ್ಲಿ 120 ಹಾಗೂ ಅದಕ್ಕಿಂತ ಹೆಚ್ಚು ಘಟಕ ಹೊಂದಿರುವ ಅಪಾರ್ಟ್ಮೆಂಟ್‌ಗಳು ಅಥವಾ 80 ಕೆಎಲ್‌ಡಿಗಿಂತಲೂ ಹೆಚ್ಚು ಕೊಳಚೆ ನೀರು ಉತ್ಪಾದಿಸುವ ಘಟಕಗಳು ಹಾಗೂ 5000 ಚ. ಮೀಟರ್‌ಗಿಂತ ಹೆಚ್ಚಿನ ವಿಸ್ತೀರ್ಣ ಇರುವ ವಾಣಿಜ್ಯ ಸಂಕೀರ್ಣಗಳು ಮಾತ್ರ ಕಡ್ಡಾಯವಾಗಿ ತ್ಯಾಜ್ಯ ನೀರು ಶುದ್ಧೀಕರಣ ಘಟಕ (STP) ಅಳವಡಿಕೆ ಮಾಡಿಕೊಳ್ಳಬೇಕು ಎಂದು ಅಧಿಸೂಚನೆಯ ತಿದ್ದುಪಡಿಯಲ್ಲಿ ತಿಳಿಸಲಾಗಿರುತ್ತದೆ.<br><br>ಈ ಹಿನ್ನಲೆಯಲ್ಲಿ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಗ್ರಾಮಪಂಚಾಯಿತಿಗಳಿಗೆ ಕಟ್ಟಡ ಪರವಾನಿಗೆ ಮಂಜೂರಾತಿ ಮಾಡುವಾಗ ಹಾಗೂ ಒಳಚರಂಡಿ ಸಂಪರ್ಕಕ್ಕೆಮಂಜೂರಾತಿ ನೀಡುವಾಗ ಸದರಿ ತಿದ್ದುಪಡಿ ಆದೇಶವನ್ನು ಕಟ್ಟು ನಿಟ್ಟಾಗಿ ಪಾಲಿಸಲು ಹಾಗೂ ಕಟ್ಟಡಗಳು ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಅಳವಡಿಸಿರುವ ಕುರಿತು ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸ್ಥಾಪನಾ ಸಮ್ಮತಿ ಪತ್ರ/ ಚಾಲನ ಸಮ್ಮತಿ ಪತ್ರ (CFE/CFO) ಪಡೆದಿರುವ ಬಗ್ಗೆ ಖಾತರಿಪಡಿಸಿಕೊಂಡು ಮಂಜೂರಾತಿ ನೀಡುವ ಬಗ್ಗೆ ಕ್ರಮ ಕೈಗೊಳ್ಳಲು ಮಂಡಳಿಯಿಂದ ಸೂಚಿಸಲಾಗಿರುತ್ತದೆ.<br><br>ಮಂಡಳಿಯಿಂದ ವಸತಿ ಸಮುಚ್ಚಯ ಹಾಗೂ ವಾಣಿಜ್ಯ ಸಂಕೀರ್ಣಗಳಿಗೆ ಸಮ್ಮತಿ ಪತ್ರ ನೀಡುವ ಸಂದರ್ಭದಲ್ಲಿ ಶುದ್ಧೀಕರಿಸಿದ ಗೃಹ ತ್ಯಾಜ್ಯ ನೀರನ್ನು ನದಿ ಪಾತ್ರಗಳಿಗೆ ವಿಸರ್ಜಿಸಲು ಅನುಮತಿ ನೀಡುತ್ತಿಲ್ಲ. ಆದರೆ, ಸಂಸ್ಕರಿಸಿದ ಗೃಹ ತ್ಯಾಜ್ಯ ನೀರನ್ನು ಸಂಪೂರ್ಣವಾಗಿ ಮರುಬಳಕೆ ಮಾಡುವಂತೆ ಷರತ್ತನ್ನು ವಿಧಿಸಲಾಗುತ್ತಿದೆ.<br><br>ಮೇಲೆ ತಿಳಿಸಿದ ದಿನಾಂಕ:12.03.2024 ರಂದು ಹೊರಡಿಸಿರುವ ಅಧಿಸೂಚನೆಯನ್ನು ಮಂಡಳಿಯಿಂದ ಈಗಾಗಲೇ ಅನುಷ್ಠಾನಗೊಳಿಸಲಾಗಿರುತ್ತದೆ. |

**ಸಂಖ್ಯೆ:** ಅಪಜೀ 53 ಇಪಿಸಿ 2026

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

## ಅನುಬಂಧ

**ದಕ್ಷಿಣ ಕನ್ನಡ ಜಿಲ್ಲೆ:**

ಮಂಗಳೂರು ಮಹಾನಗರ ಪಾಲಿಕೆಯು ನಗರದ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಲು ನಗರದ ವಿವಿಧ ಸ್ಥಳಗಳಲ್ಲಿ ಒಟ್ಟು 4 ರೊಚ್ಚು ನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿ ನಿರ್ವಹಿಸುತ್ತಿದೆ. ವಿವರಗಳು ಈ ಕೆಳಗಿನಂತಿವೆ.

| ಕ್ರ ಸಂ | ಸ್ಥಳ | ಸಾಮರ್ಥ್ಯ MLD | ಪ್ರಸ್ತುತ ಸಂಸ್ಕರಿಸಲಾಗುತ್ತಿರುವ ತ್ಯಾಜ್ಯ ನೀರಿನ ಸಾಮರ್ಥ್ಯ MLD |
|---|---|---|---|
| 1 | ಕಾವೂರು | 43.5 | 25 ರಿಂದ 30 |
| 2 | ಜೆಪ್ಪಿನಮೊಗರು | 20 | 9 ರಿಂದ 12 |
| 3 | ಮಧ್ಯ (ಸುರತ್ಕಲ್) | 16.5 | 805 ರಿಂದ 10 |
| 4 | ಪಚ್ಚನಾಡಿ | 8.75 | 6 ರಿಂದ 6.5 |

- ಕಾವೂರು ರೊಚ್ಚು ನೀರು ಸಂಸ್ಕರಣಾ ಘಟಕದ ಸಂಸ್ಕರಿಸಿದ ನೀರನ್ನುಸುಮಾರು 25 ರಿಂದ 30 MLD ನೀರನ್ನು ಎಮ್.ಎಸ್.ಇ.ಝಡ್ ಲಿಮಿಟೆಡ್ ಇವರು ತಮ್ಮ ವ್ಯಾಪ್ತಿಯಲ್ಲಿ ಬರುವ ಕೈಗಾರಿಕೆಗಳಿಗೆ Tertiary Treatment ನಂತರ ಅಗತ್ಯತೆಗೆ ಬಳಸಿಕೊಳ್ಳಲಾಗುತ್ತಿದೆ.

- ಜೆಪ್ಪಿನಮೊಗರು ರೊಚ್ಚು ನೀರು ಸಂಸ್ಕರಣಾ ಘಟಕದ ಸಂಸ್ಕರಿಸಿದ ನೀರನ್ನು ಸುಮಾರು 9 ರಿಂದ 12 MLD ಸಂಸ್ಕರಿಸಿಲಾದ ನೀರನ್ನು ನೇತ್ರಾವತಿ ನದಿಗೆ ಬಿಡಲಾಗುತ್ತಿದೆ.

- ಮಧ್ಯ (ಸುರತ್ಕಲ್) ರೊಚ್ಚು ನೀರು ಸಂಸ್ಕರಣಾ ಘಟಕದ ಸಂಸ್ಕರಿಸಿದ ಸುಮಾರು 8.5 ರಿಂದ 10 MLD ನೀರನ್ನು ನಂದಿನಿ ನದಿಗೆ ಬಿಡಲಾಗುತ್ತಿದೆ.

- ಪಚ್ಚನಾಡಿ ರೊಚ್ಚು ನೀರು ಸಂಸ್ಕರಣಾ ಘಟಕದ ಸಂಸ್ಕರಿಸಿದ 6 ರಿಂದ 6.5 MLD ನೀರನ್ನು ಪಿಳಿಕುಳ ಉದ್ಯಾನವನ ಇಲ್ಲಿ ಭಾಗಶಃ ಪಿಳಿಕುಳ ಉದ್ಯಾನವನಕ್ಕಾಗಿ ಬಳಸಿ ಉಳಿದ ನೀರನ್ನು ನೇತ್ರಾವತಿ ಹಾಗೂ ಗುರುಪುರ ನದಿಗೆ ಬಿಡಲಾಗುತ್ತಿದೆ.

ಸದರಿ ಮೇಲ್ಕಂಡ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು 2012 ರಲ್ಲಿ ಸ್ಥಾಪಿಸಲಾಗಿದ್ದು ಈಗ ನಗರಗಳ ಆಧುನೀಕರಣ ಹಾಗೂ ಜನಸಂಖ್ಯೆ ಹೆಚ್ಚಳದಿಂದ ಗೃಹ ಬಳಕೆ ತ್ಯಾಜ್ಯ ನೀರು ಉತ್ಪತ್ತಿಯು ಹೆಚ್ಚಾಗಿದ್ದು ಸದರಿ ಘಟಕಗಳು ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಲು ಸದರಿ ಘಟಕಗಳ ಸಾಮರ್ಥ್ಯವು ಕಡಿಮೆಯಿದ್ದು ಹಾಗೂ ಹಳೆಯ ತಂತ್ರಜ್ಞಾನವಾಗಿರುತ್ತದೆ. ಸದರಿ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಸಂಸ್ಕರಿಸಿದ ನೀರಿನ ಮಾದರಿಗಳನ್ನು ಪ್ರಾದೇಶಿಕ ಪ್ರಯೋಗಾಲಯ- ಮಂಗಳೂರು ಇಲ್ಲಿ ಮಾಹೆಯಾನ ವಿಶ್ಲೇಷಣೆ ಮಾಡುತ್ತಿದ್ದು, ವಿಶ್ಲೇಷಣಾ ವರದಿಯಂತೆ ಮಂಡಳಿಯು ಸೂಚಿಸಿದ ಮಾನದಂಡಗಳನ್ನು ಮೀರುತ್ತಿದ್ದರಿಂದ ಪ್ರಾದೇಶಿಕ ಕಛೇರಿ – ಮಂಗಳೂರು ಇವರಿಂದ ಮಹಾನಗರ ಪಾಲಿಕೆಗೆ ನೋಟಿಸು ಹಾಗೂ ಕಾರಣ ಕೇಳುವ ನೋಟಿಸನ್ನು ನೀಡಲಾಗಿರುತ್ತದೆ. ಆದರೂ ಸಹ ಮಂಗಳೂರು ಮಹಾನಗರ ಪಾಲಿಕೆಯವರು ತ್ಯಾಜ್ಯ ನೀರು ಶುದ್ಧೀಕರಣ ಘಟಕದ ಸಮಸ್ಯೆಯನ್ನು ಸರಿಪಡಿಸಲು ಮತ್ತು ಅಗತ್ಯ ಗುಣಮಟ್ಟಕ್ಕೆ ಒಳಚರಂಡಿ ನೀರನ್ನು ಸಂಸ್ಕರಿಸಲು ಹಾಗೂ ಸದರಿ ಘಟಕವನ್ನು ನವೀಕರಿಸಲು/ ಆಧುನೀಕರಿಸಿ ಕಾರ್ಯಾಚರಣೆ ನಡೆಸಲು ವಿಫಲರಾಗಿರುತ್ತಾರೆ.

ಗೃಹ ಬಳಕೆ ತ್ಯಾಜ್ಯ ನೀರು ಇತರ ಮೂಲಗಳಿಂದ (Missing link) ನದಿಗಳಿಗೆ/ ಕೆರೆಗಳಿಗೆ ಸೇರುತ್ತಿರುವ ಬಗ್ಗೆ, ಹಾಗೂ ಒಳಚರಂಡಿ ವ್ಯವಸ್ಥೆ (Under Ground Drainage-UGD) ಸರಿಯಾಗಿ ನಿರ್ವಹಣೆಯಾಗದೇ ಇರುವ ಬಗ್ಗೆ, ಮಹಾನಗರ ಪಾಲಿಕೆಯ ವಿರುದ್ಧ ದೂರುಗಳು ಮಂಗಳೂರು ಪ್ರಾದೇಶಿಕ ಕಚೇರಿಗೆ ಸ್ವೀಕೃತವಾದ ಹಿನ್ನಲೆಯಲ್ಲಿ ನೋಟಿಸು ನೀಡುವುದರ ಮೂಲಕ ಹಾಗೂ ಮಂಡಳಿಯು ಗಮನಿಸಿದ ಅಂಶಗಳಿಗೆ ಮಂಗಳೂರು ಮಹಾನಗರ ಪಾಲಿಕೆಯಿಂದ ಅನುಪಾಲನೆ ಮಾಡದಿರುವ ಹಿನ್ನಲೆಯಲ್ಲಿ ದಿನಾಂಕ: 08.12.2025 ರಂದು In the Court of Principal Senior Civil Judge and CJ.M Mangaluru, Dakshina Kannada ಇಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ಪ್ರಸ್ತುತ ಹಾಗೂ ಹಿಂದಿನ ಆಯುಕ್ತರ ವಿರುದ್ಧ ಈಗಾಗಲೇ ಕ್ರಿಮಿನಲ್ ಮೊಕ್ಕದಮೆಯನ್ನು ಹೂಡಲಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 14 ಸ್ಥಳೀಯ ಸಂಸ್ಥೆಗಳಿದ್ದು, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ದಿನಂಪ್ರತಿ 433 ಟಿಪಿಡಿಯಷ್ಟು ಘನತ್ಯಾಜ್ಯವು ಉತ್ಪತ್ತಿಯಾಗುತ್ತಿದ್ದು, ಅದನ್ನು ಸಂಗ್ರಹಣೆ ಮಾಡಿ ಹಸಿಕಸ ಮತ್ತು ಒಣ ಕಸವನ್ನಾಗಿ ವಿಂಗಡಿಸಿ ವಿಲೇವಾರಿ ಮಾಡಲಾಗುತ್ತಿದೆ.

ಗುರುಪುರ ನದಿಯ ಮಾಲಿನ್ಯದ ಕುರಿತು ಈಗಾಗಲೇ ಹಸಿರು ನ್ಯಾಯಾಲಯದಲ್ಲಿ PB 307/2022 (SZ 151/2023) ರಂತೆ ಪ್ರಕರಣ ದಾಖಲಾದ ಹಿನ್ನಲೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಇತರ ಇಲಾಖೆಗಳ/ ಸಂಸ್ಥೆಗಳ ಪ್ರತಿನಿಧಿಗಳು/ ಪರಿಣಿತರನ್ನೊಳಗೊಂಡ ಜಂಟಿ ಸಮಿತಿ ಸಭೆಯ 16.05.2022 ರ ನಡುವಳಿಯಂತೆ ಮಹಾನಗರ ಪಾಲಿಕೆ ಮತ್ತು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯವರಿಗೆ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರಿಗೆ ಸಾಮಾನ್ಯ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಅಳವಡಿಸಿ ಸಂಸ್ಕರಿಸಲು ಹಾಗೂ ಘನತ್ಯಾಜ್ಯ ನಿರ್ವಹಣೆಗಾಗಿ ಈಗಾಗಲೇ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರ್ದೇಶನ ನೀಡಲಾಗಿರುತ್ತದೆ.

ಮಂಡಳಿಯಿಂದ ನೀಡಿರುವ ಸಮ್ಮತಿ ಪತ್ರದ ನಿಯಮಗಳು ಹಾಗೂ ಷರತ್ತುಗಳನ್ನು ಪಾಲಿಸದೇ ಇರುವಂತಹ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿನ 06 ಕೈಗಾರಿಕೆಯವರಿಗೆ ಮಂಗಳೂರು ಪ್ರಾದೇಶಿಕ ಕಛೇರಿಯಿಂದ ಈಗಾಗಲೇ ಪರಿಸರ ಪರಿಹಾರವನ್ನು ವಿಧಿಸಿ ಡಿಮಾಂಡ್ ನೋಟಿಸನ್ನು ನೀಡಲಾಗಿದೆ.

ಮಂಡಳಿಯಿಂದ ನೀಡಿರುವ ಸಮ್ಮತಿ ಪತ್ರದ ನಿಯಮಗಳು ಹಾಗೂ ಷರತ್ತುಗಳನ್ನು ಪಾಲಿಸದೇ ಇರುವ ಇತರೆ ಕೈಗಾರಿಕೆಗಳಿಗೆ ಕಾರಣ ಕೇಳುವ ನೋಟಿಸು ನೀಡುವ ಮೂಲಕ ಕೈಗಾರಿಕೆಯವರಿಂದ ಅನುಪಾಲನೆ ಮಾಡಿಸಲಾಗಿದೆ ಹಾಗೂ ಅನುಪಾಲನೆ ಮಾಡದಂತಹ ಕೈಗಾರಿಕೆಯವರಿಗೆ (Notice of Proposed Direction - NPD) ಪ್ರಸ್ತಾವಿತ ಮುಚ್ಚುವ ಆದೇಶ ಹಾಗೂ ಮುಚ್ಚುವ ಆದೇಶ ನೀಡಲು ಮಂಗಳೂರು ಪ್ರಾದೇಶಿಕ ಕಛೇರಿಯಿಂದ ಶಿಫಾರಸ್ಸು ಮಾಡಲಾಗಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. 2024-25 ಸಾಲಿನಲ್ಲಿ 06 ಕೈಗಾರಿಕೆಗಳಿಗೆ ಹಾಗೂ 2025-26 ಸಾಲಿನಲ್ಲಿ 07 ಕೈಗಾರಿಕೆಗಳಿಗೆ ಮುಚ್ಚುವ ಆದೇಶ ನೀಡಲಾಗಿದೆ.

ಮುಂದುವರೆದು ನೀರಿನ ತೀವ್ರ ಬಳಕೆ ಹಾಗೂ ವಿಸರ್ಜನೆಯನ್ನು ತಪ್ಪಿಸಲು ಮಂಗಳೂರು ಪ್ರಾದೇಶಿಕ ಕಚೇರಿಯ ಆದೇಶದ ಮೇರೆಗೆ ಹಲವು ಕೈಗಾರಿಕೆಗಳು ಈಗಾಗಲೇ ಶೂನ್ಯ ದ್ರವ ವಿಸರ್ಜನೆ (Zero Liquid Discharge Plant) ಘಟಕವನ್ನು ಅಳವಡಿಸಿ ಅನುಪಾಲನೆ ಮಾಡಿರುತ್ತಾರೆ.

**ಉತ್ತರ ಕನ್ನಡ ಜಿಲ್ಲೆ:**

ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ನಗರಸಭೆ - ಕಾರವಾರ (1.5 ಎಮ್.ಎಲ್.ಡಿ) ಹಾಗೂ ಪುರಸಭೆ- ಭಟ್ಕಳ (1.5 ಎಮ್.ಎಲ್.ಡಿ) ಇವುಗಳಲ್ಲಿ ಎಸ್.ಟಿ.ಪಿ ಪ್ಲಾಂಟ್‌ಗಳನ್ನು ಅಳವಡಿಸಲಾಗಿದೆ. ಇದರ ಹೊರತುಪಡಿಸಿ ಇತರೆ ಸ್ಥಳೀಯ ಸಂಸ್ಥೆಗಳು ಸ್ಥಳಗಳನ್ನು ಗುರುತಿಸಿರುತ್ತಾರೆ ಹಾಗೂ ರಾಷ್ಟ್ರೀಯ ಹಸಿರು ನ್ಯಾಯ ಪೀಠದ ಆದೇಶದಂತೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ವಿಶೇಷ ಕಾರ್ಯಪಡೆಯನ್ನು ರಚಿಸಿದ್ದು, ಆ ಸಭೆಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಒಳಚರಂಡಿ ವ್ಯವಸ್ಥೆ (Underground Drainage Gystem) ಮತ್ತು ಎಸ್.ಟಿ.ಪಿ (Sewage Treatment Plant) ಗಳ ಕಾಮಗಾರಿಯನ್ನು ಪೂರ್ಣಗೊಳಿಸುವ ಕುರಿತು ಚರ್ಚಿಸಲಾಗಿರುತ್ತದೆ.

ಪ್ರಾದೇಶಿಕ ಕಛೇರಿ ಕಾರವಾರ ವ್ಯಾಪ್ತಿಯಲ್ಲಿ ಕೈಗಾರಿಕಾ ಘಟಕಗಳು ಕೈಗಾರಿಕಾ ಪ್ರದೇಶಗಳಲ್ಲಿ ಜಲ ಕಾಯ್ದೆ 1974ರ ಅಡಿಯಲ್ಲಿ STP & ETP ಗಳನ್ನು ಅಳವಡಿಸಿ ಮಂಡಳಿಯ ಪರವಾನಗೆಯೊಂದಿಗೆ, ಮಂಡಳಿಯ ಗುಣ ಮಾನಕಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿರುತ್ತವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 13 ಸ್ಥಳೀಯ ಸಂಸ್ಥೆಗಳಿದ್ದು, 10 ಸ್ಥಳೀಯ ಸಂಸ್ಥೆಗಳು ತಮ್ಮದೇ ಆದ ಘನತ್ಯಾಜ್ಯ ವಿಲೇವಾರಿ ಘಟಕವನ್ನು ಅಭಿವೃದ್ಧಿಪಡಿಸಿರುತ್ತವೆ. ಇನ್ನುಳಿದ 3 (ಕುಮಟಾ, ಜಾಲಿ ಮತ್ತು ಮಂಕಿ) ಸ್ಥಳೀಯ ಸಂಸ್ಥೆಗಳು ಪಕ್ಕದ ಸ್ಥಳೀಯ ಸಂಸ್ಥೆಯೊಂದಿಗೆ ಒಡಂಬಡಿಕೆಯೊಂದಿಗೆ ವಿಲೇವಾರಿ ಮಾಡುತ್ತಿರುತ್ತಾರೆ. ಈ ಎಲ್ಲ ಸ್ಥಳೀಯ ಸಂಸ್ಥೆಗಳಿಂದ ಸುಮಾರು 133 ಟನ್‌ಗಳಷ್ಟು ಪ್ರತಿ ದಿನ ಘನತ್ಯಾಜ್ಯ ಉತ್ಪತ್ತಿಯಾಗುವುದೆಂದು ಅಂದಾಜಿಸಿದ್ದು, ಪ್ರತಿ ದಿನ 128 ಟನ್‌ಗಳಷ್ಟು ಘನತ್ಯಾಜ್ಯವನ್ನು ಸಂಗ್ರಹಿಸಿ ಘಟಕದಲ್ಲಿ ಸಂಸ್ಕರಣೆ ಮಾಡಲಾಗುತ್ತಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 13 ಸ್ಥಳೀಯ ಸಂಸ್ಥೆಗಳಿಂದ ಸುಮಾರು 44.28 ಎಮ್‌ಎಲ್ ಡಿಯಷ್ಟು ತ್ಯಾಜ್ಯ ನೀರು ಉತ್ಪತ್ತಿಯಾಗುತ್ತಿದ್ದು, 2 ಸ್ಥಳೀಯ ಸಂಸ್ಥೆಗಳಲ್ಲಿ ಅಂದರೆ ನಗರಸಭೆ - ಕಾರವಾರ ಮತ್ತು ಪುರಸಭೆ - ಭಟ್ಕಳ ಇಲ್ಲಿ ತಲಾ 1.5 ಎಮ್‌ಎಲ್‌ಡಿ (ಒಟ್ಟು 3 ಎಮ್‌ಎಲ್‌ಡಿ) ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಿದ್ದು, ಅವುಗಳಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಉದ್ಯಾನವನಗಳಿಗೆ ನೀರುಣಿಸಲು ಮತ್ತು ಕಟ್ಟಡ ನಿರ್ಮಾಣಗಳಲ್ಲಿನ ಧೂಳು ತಡೆಯಲು ಬಳಸಲಾಗುತ್ತಿದೆ. ಮುಂದುವರೆದು, ದಾಂಡೇಲಿ ನಗರಸಭೆಯಲ್ಲಿ 8 ಎಮ್‌ಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ Trail run ನಡೆಸುತ್ತಿರುತ್ತದೆ ಮತ್ತು 0.5 ಎಮ್‌ಎಲ್‌ಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಚಾಲನೆಯಲ್ಲಿರುತ್ತದೆ.

ಮುಂದುವರೆದು, ನಗರಸಭೆ -ಕಾರವಾರ 3 ಎಮ್‌ಎಲ್‌ಡಿ, ಪುರಸಭೆ- ಕುಮಟಾದಲ್ಲಿ 4.6 ಎಮ್ ಎಲ್‌ಡಿಯ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಪುರಸಭೆ- ಭಟ್ಕಳದಲ್ಲಿ 3 ಎಮ್‌ಎಲ್‌ಡಿ, ಪುರಸಭೆ - ಹಳಿಯಾಳ ಹಳಿಯಾಳ 3.5 ಎಮ್‌ಎಲ್‌ಡಿ, ಪಟ್ಟಣಪಂಚಾಯತ -ಹೊನ್ನಾವರ 2.6 ಎಮ್‌ಎಲ್‌ಡಿ, ಪಟ್ಟಣ ಪಂಚಾಯತ – ಜಾಲಿಯಲ್ಲಿ 3 ಎಮ್‌ಎಲ್‌ಡಿ (ಒಟ್ಟು 28.2 ಎಮ್‌ಎಲ್‌ಡಿ) ಕಾಮಗಾರಿ ಚಾಲನೆಯಲ್ಲಿರುತ್ತದೆ. ಇನ್ನುಳಿದಂತೆ, ಮಂಕಿ, ಸಿದ್ದಾಪುರ, ಯಲ್ಲಾಪುರ, ಶಿರಸಿ, ಅಂಕೋಲಾ ಮತ್ತು ಮುಂಡಗೋಡಗಳಲ್ಲಿ ಜಾಗ ಗುರುತಿಸಿದ್ದು, ಡಿಪಿಆರ್ ಸಲ್ಲಿಸಬೇಕಿರುತ್ತದೆ. ಈ ಕುರಿತು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅತೀ ಜರೂರಾಗಿ ಕಾಮಗಾರಿ ಆರಂಭಿಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿರುತ್ತಾರೆ.

ಮುಂದುವರೆದು, ಇನ್ನು 13.08 ಎಮ್‌ಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರಿಗೆ ಒಳಚರಂಡಿ ಮತ್ತು ಎಸ್‌ಟಿಪಿ ಕಲ್ಪಿಸಲು ಕಾರ್ಯಯೋಜನೆಯನ್ನು ಸ್ಥಳೀಯ ಸಂಸ್ಥೆಗಳಿಂದ ರೂಪಿಸಬೇಕಿರುತ್ತದೆ.
ಪ್ರಸ್ತುತ ಎಲ್ಲ ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ಇಲ್ಲದ ಪ್ರದೇಶಗಳಲ್ಲಿ ಸೆಪ್ಟಿಕ್ ಟ್ಯಾಂಕ್ ಮತ್ತು ಸೋಕ್ ಪಿಟ್ ಅಳವಡಿಸಿ ತ್ಯಾಜ್ಯ ನೀರನ್ನು ವಿಲೇವಾರಿ ಮಾಡಲಾಗುತ್ತಿದೆ.

**ಉಡುಪಿ ಜಿಲ್ಲೆ:**

ಉಡುಪಿ ನಗರಸಭೆಯು ನಗರದ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಲು ಉಡುಪಿ ಮತ್ತು ಕಾರ್ಕಳ ನಗರದಲ್ಲಿ ಒಟ್ಟು 2 ರೊಚ್ಚು ನೀರು ಸಂಸ್ಕರಣಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ವಿವರಗಳು ಈ ಕೆಳಕಂಡಂತಿವೆ

| **ಕ್ರ ಸಂ** | **ಸ್ಥಳೀಯ ಸಂಸ್ಥೆ ಮತ್ತು ಸ್ಥಳ** | **ಸಾಮರ್ಥ್ಯ ಎಮ್.ಎಲ್.ಡಿ** | **ಪ್ರಸ್ತುತ ಸಂಸ್ಕರಿಸಲಾಗುತ್ತಿರುವ ತ್ಯಾಜ್ಯ ನೀರಿನ ಸಾಮರ್ಥ್ಯ ಎಮ್.ಎಲ್.ಡಿ** |
|---|---|---|---|

| | | | |
|---|---|---|---|
| 1 | ನಗರ ಸಭೆ, ಉಡುಪಿ, ನಿಟ್ಟೂರು | 12 | 10 |
| 2 | ಪುರಸಭೆ, ಕಾರ್ಕಳ, ಕಾಬೆಟ್ಟು | 3 | 2.62 |

ಉಡುಪಿ ನಗರಸಭೆಯ ರೊಚ್ಚು ನೀರು ಸಂಸ್ಕರಣಾ ಘಟಕದ ಸಂಸ್ಕರಿಸಿದ ನೀರಿನ ಮಾದರಿಗಳನ್ನು ಪ್ರಾದೇಶಿಕ ಪ್ರಯೋಗಲಾಯ ಮಂಗಳೂರು ಮಾಹೆಯಾನ ವಿಶ್ಲೇಷಣೆ ಮಾಡುತ್ತಿದ್ದು, ವಿಶ್ಲೇಷಣಾ ವರದಿಯಂತೆ ಮಾನದಂಡಗಳು ಮಂಡಳಿಯು ಸೂಚಿಸಿದ ಮಾನದಂಡಗಳು ಮೀರುತ್ತಿದ್ದರಿಂದ ಉಡುಪಿ ಪ್ರಾದೇಶಿಕ ಕಛೇರಿಯಿಂದ ಉಡುಪಿ ನಗರಸಭೆಗೆ ನೋಟೀಸ್ ಹಾಗೂ ಕಾರಣ ಕೇಳುವ ನೋಟೀಸ್‌ನ್ನು ನೀಡಲಾಗಿರುತ್ತದೆ. ಸದರಿಯವರಿಗೆ ನೋಟೀಸ್‌ನ್ನು ಜಾರಿ ಮಾಡಿ, Restraining order ನ್ನು ಜಾರಿ ಮಾಡಲಾಗಿರುತ್ತದೆ ಹಾಗೂ ಸದರಿಯವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮುಂದುವರೆದು, ಕಾರ್ಕಳ ಪುರಸಭೆ ವ್ಯಾಪ್ತಿಯ ರೊಚ್ಚು ನೀರು ಸಂಸ್ಕರಣ ಘಟಕವು ಕಾರ್ಯಚರಿಸುತ್ತಿದ್ದು, ಸಂಸ್ಕರಿಸಿದ ನೀರಿನ ಮಾದರಿಗಳನ್ನು ಸಂಗ್ರಹಿಸಿದ್ದು, ವಿಶ್ಲೇಷಣಾ ವರದಿಯಂತೆ ಮಾನದಂಡಗಳು ಮಂಡಳಿಯು ಸೂಚಿಸಿದ ಮಾನದಂಡಗಳು ಮಿತಿಯಲ್ಲಿರುತ್ತದೆ.

ಉಡುಪಿ ಜಿಲ್ಲೆಯಲ್ಲಿರುವ ಈ ಕೆಳಕಂಡ ಸ್ಥಳೀಯ ಸಂಸ್ಥೆಗಳಲ್ಲಿ ರೊಚ್ಚು ನೀರು ಸಂಸ್ಕರಣ ಘಟಕವನ್ನು ಸ್ಥಾಪಿಸಲು ಉಡುಪಿ ಪ್ರಾದೇಶಿಕ ಕಛೇರಿಯಿಂದ ಅಭಿಪ್ರಾಯವನ್ನು ನೀಡಲಾಗಿದೆ. ಪ್ರಸ್ತಾಪಿತ ರೊಚ್ಚು ನೀರಿನ ಘಟಕದ ಸಾಮರ್ಥ್ಯ ಈ ಕಳಕಂಡಂತಿದೆ

| ಕ್ರ ಸಂ | ಸ್ಥಳೀಯ ಸಂಸ್ಥೆಯ ಹೆಸರು | ಪ್ರಸ್ತಾಪಿತ ರೊಚ್ಚು ನೀರು ಸಂಸ್ಕರಣ ಘಟದ ಸಾಮರ್ಥ್ಯ (ಎಮ್.ಎಲ್.ಡಿ) |
|---|---|---|
| 1 | ಕುಂದಾಪುರ | 4.65 |
| 2 | ಬೈಂದೂರು | 3.99 |
| 3 | ಕಾಪು | 3.34 |
| 4 | ಸಾಲಿಗ್ರಾಮ | 2.31 |
| 5 | ಕಾರ್ಕಳ | 0.94 |

ಉಡುಪಿ ಜಿಲ್ಲೆಯಲ್ಲಿರುವ ಸ್ಥಳೀಯ ಸಂಸ್ಥೆಗಳಿಂದ ಉತ್ಪಾದನೆಯಾಗುವ ಘನ ತ್ಯಾಜ್ಯದ ವಿವರಗಳು ಈ ಕೆಳಗಿನಂತಿವೆ.

| ಕ್ರ ಸಂ | ಸ್ಥಳೀಯ ಸಂಸ್ಥೆಯ ಹೆಸರು | ಸ್ಥಾಪಿತ ಸಾಮರ್ಥ್ಯ (ಟಿ.ಪಿ.ಡಿ) | ಉತ್ಪಾದನೆ (ಟಿ.ಪಿ.ಡಿ) |
|---|---|---|---|
| 1 | ನಗರಸಭೆ, ಉಡುಪಿ | 75 | 72 |
| 2 | ಪುರಸಭೆ ಕುಂದಾಪುರ | 15 | 13 |
| 3 | ಪುರಸಭೆ, ಕಾರ್ಕಳ | 15 | 13 |
| 4 | ಪುರಸಭೆ, ಕಾಪು | 15 | 10 |
| 5 | ಪಟ್ಟಣ ಪಂಚಾಯತ್ ಸಾಲಿಗ್ರಾಮ | 4 | 3.5 |
| 6 | ಪಟ್ಟಣ ಪಂಚಾಯತ್ ಬೈಂದೂರು | 4.5 | 1.5 |

ಬೈಂದೂರು ಹಾಗೂ ಸಾಲಿಗ್ರಾಮ ಪಟ್ಟಣ ಪಂಚಾಯತ್‌ಗಳಲ್ಲಿ ಒಣ ತ್ಯಾಜ್ಯವನ್ನು ಎಮ್. ಆರ್. ಎಫ್ ಘಟಕದ ಮೂಲಕ ವಿಂಗಡಿಸಿ ವಿಲೇವಾರಿ ಮಾಡಲಾಗುತ್ತದೆ. ಬೈಂದೂರು ಪಟ್ಟಣ ಪಂಚಾಯತ್‌ನಲ್ಲಿ ಹಸಿ ಕಸವನ್ನು ಕಾಂಪೋಸ್ಟ್ ಮಾಡಲಾಗುತ್ತದೆ (Vermi compost) ಹಾಗೂ ಸಾಲಿಗ್ರಾಮ ಪಟ್ಟಣ ಪಂಚಾಯತ್‌ನಲ್ಲಿ Organic waste convertor ಅಳವಡಿಸಿ ಗೊಬ್ಬರವನ್ನಾಗಿ ಮಾಡಲಾಗುತ್ತಿದೆ.

ಗೃಹ ಬಳಕೆ ಘನ ಮತ್ತು ದ್ರವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡದೇ ಉಲ್ಲಂಘಿಸಿರುವ ಪ್ರಕರಣಗಳು ಯಾವುದೇ ಇರುವುದಿಲ್ಲ.

ಮಂಡಳಿಯಿಂದ ನೀಡಿರುವ ಸಮ್ಮತಿ ಪತ್ರದ ನಿಯಮಗಳು ಹಾಗೂ ಷರತ್ತುಗಳನ್ನು ಪಾಲಿಸದೇ ಇರುವಂತಹ 05 ಕೈಗಾರಿಕೆಯವರಿಗೆ ಉಡುಪಿ ಪ್ರಾದೇಶಿಕ ಕಛೇರಿಯಿಂದ ಈಗಾಗಲೇ ಪರಿಸರ ಪರಿಹಾರವನ್ನು ವಿಧಿಸಿ ಡಿಮಾಂಡ್ ನೋಟಿಸನ್ನು ನೀಡಲಾಗಿದೆ.

**ಉತ್ತರ ಕನ್ನಡ ಜಿಲ್ಲೆ (ಕಾರವಾರ)** ಯಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ.

***